Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 12/2025

ಪ್ರಾ.ಸಾ. 3 ಚಾ.ಸಾ 4

| | | |
|---|---|---|
| ಹೆಸರು | : | ಬುಗ್ಗಪ್ಪ |
| ತಂದೆಯ ಹೆಸರು | : | ಚಂದ್ರುಪ್ಪ |
| ವಯಸ್ಸು | : | 66 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಕಾಕಲವಾರ |

## ಪ್ರಮಾಣ ವಚನ ಭೋಧಿಸಿದ ದಿನಾಂಕಃ 24-12-2025
## ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಚಾಸಾ-1 ಮತ್ತು 5 ರವರ ಪರಿಚಯ ಇರುತ್ತದೆ. ಕಾಕಲವಾರ ಗ್ರಾಮದ ಸದಾಶಿವರೆಡ್ಡಿ ರವರ ಮನೆಯಲ್ಲಿ ಎತ್ತು ಕಟ್ಟುವ ಖಾಲಿ ಜಾಗದಲ್ಲಿ ಒಂದು ಜೊತೆ ಚಪ್ಪಲಿ ಮತ್ತು ಒಂದು ಚಾಕಲೇಟ ಕವರ ಪೊಲೀಸರು ಜಪ್ತಿ ಮಾಡಿಕೊಂಡಿರುತ್ತಾರೆ. ಆ ಜಾಗದಲ್ಲಿ ಕೊಲೆ ಮಾಡಿರುತ್ತಾರೆ ಎಂದು ಚಾಸಾ-1 ರವರು ಸ್ಥಳವನ್ನು ತೋರಿಸಿರುತ್ತಾರೆ. ಆ ಚಪ್ಪಲಿ ಮತ್ತು ಚಾಕಲೇಟ ಕವರನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಒಂದು ಜೊತೆ ಚಪ್ಪಲಿ ತೋರಿಸಿದ್ದು ನೋಡಿ ಗುರುತಿಸಿರುತ್ತಾರೆ ಅದನ್ನು **ಮು.ಮಾ.1** ಎಂದು ಗುರುತಿಸಲಾಯಿತು. ಸಾಕ್ಷಿದಾರರು ಚಾಕಲೇಟ ಕವರನ್ನು ತೋರಿಸಲಾಗಿದ್ದು ಅದನ್ನು ನೋಡಿ ಗುರುತಿಸಿದ್ದು ಅದನ್ನು **ಮು.ಮಾ.2** ಎಂದು ಗುರುತಿಸಲಾಯಿತು. ಸುಮಾರು 1 ವರ್ಷ 2 ತಿಂಗಳ ಹಿಂದೆ ಮಧ್ಯಾಹ್ನ 4.30-5.30 ರವರೆಗೆ ಜಪ್ತಿ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆಯನ್ನು ನೋಡಿ ಗುರುತಿಸಿಲಾಗಿದ್ದು ಅದನ್ನು ಈಗಾಗಲೇ ನಿ.ಪಿ.11 ಎಂದು ಗುರುತಿಸಲಾಗಿದ್ದು ಸಾಕ್ಷಿದಾರರ ಸಹಿಯನ್ನು **ನಿ.ಪಿ.11(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಟ್ಟು 8 ಭಾವಚಿತ್ರಗಳನ್ನು ತೆಗೆದಿದ್ದು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ.13 ರಿಂದ 20 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ

2. ನನಗೆ ಕನ್ನಡ ಓದಲೂ ಬರೆಯಲು ಬರುವುದಿಲ್ಲ ಎಂದರೆ ಸರಿ. ನಿ.ಪಿ.11 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಯಾಕೆಂದರೆ ನಾನು ಶಾಲೆಗೆ ಹೋಗಿರುವುದಿಲ್ಲ. ನಿ.ಪಿ.13 ರಿಂದ 20 ನ್ನು ಪೊಲೀಸರು ಆತ ಮೃತ ಪಟ್ಟಿದ ಎಂದು ಭಾವಚಿತ್ರಗಳನ್ನು ತೆಗೆದಿರುತ್ತಾರೆ. ನಿ.ಪಿ.13 ರಿಂದ 20 ರಲ್ಲಿ ಎತ್ತು ಕಟ್ಟುವ ಗೊದಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಗೋವಿಂದಮ್ಮ ಇವರು ನಮ್ಮ ಊರಿನವರು ಆಗಿರುತ್ತಾರೆ. ಚಾಸಾ-1 ಮತ್ತು ನಾನು ಒಂದೇ ಜಾತಿಯವರು ಆಗಿರುತ್ತೇವೆ. ನಿ.ಪಿ.11 ರಲ್ಲಿ ಮನೆ ಸಂಖ್ಯೆ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು 1 ವರ್ಷ 2 ತಿಂಗಳ ಹಿಂದೆ ಪೊಲೀಸರು ನನ್ನನ್ನು ಸದರಿ ಸ್ಥಳಕ್ಕೆ ಕರೆಯಿಸಿರುತ್ತಾರೆ ಸಾಯಂಕಾಲ 4.30-5.30 ರವರೆಗೆ ನಿ.ಪಿ.11 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಹೊಸ ಚಪ್ಪಲಿ ಆಗಿರುತ್ತವೆ ಎನ್ನುವುದಕ್ಕೆ ಸಾಕ್ಷಿದಾರರು ಅವೇ ಚಪ್ಪಲಿ ಇದ್ದವು ಎಂದು ನುಡಿಯುತ್ತಾರೆ. ಮು.ಮಾ.2 ಚಾಕಲೇಟ ಕವರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮು.ಮಾ.1 ಮತ್ತು2 ನ್ನು ಜಪ್ತಿ ಮಾಡಿಕೊಂಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಕರೆದಿರುತ್ತಾರೆ ನನ್ನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.

Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 12/2025

ಪ್ರಾ.ಸಾ. 4 ಚಾ.ಸಾ 6

| | | |
|---|---|---|
| ಹೆಸರು | : | ಶರಣಪ್ಪ |
| ತಂದೆಯ ಹೆಸರು | : | ಲಕ್ಷ್ಮಪ್ಪ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಕ್ರೂಸರ್ ವಾಹನದ ಚಾಲಕ |
| ವಾಸ | : | ಕಾಕಲವಾರ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 24-12-2025
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-7 ಮಲ್ಲೇಶ ಇವರ ಪರಿಚಯ ಇರುತ್ತದೆ. ನನ್ನನ್ನು ಮತ್ತು ಚಾಸಾ-7 ರವರನ್ನು ದಿಃ 10.02.2024 ರಂದು ಪೊಲೀಸ ಠಾಣೆಗೆ ಕರೆಯಿಸಿ ಸಾಯಂಕಾಲ 7.30 ರ ಸುಮಾರು ಠಾಣೆಯಲ್ಲಿ ಮೃತನ ಒಂದು ಪ್ಯಾಂಟ ಮತ್ತು ಅಂಗಿಯನ್ನು ತೋರಿಸಿರುತ್ತಾರೆ ಜಪ್ತಿ ಪಂಚನಾಮೆ ಮಾಡಿರುತ್ತಾರೆ. ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.32** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.32(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಎರಡು ಭಾವಚಿತ್ರಗಳನ್ನು ತೆಗೆದಿದ್ದು ಅವುಗಳನ್ನು ತೋರಿಸಲಾಗಿದ್ದು ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರಗಳನ್ನು **ನಿ.ಪಿ.33 ಮತ್ತು 34** ಎಂದು ಗುರುತಿಸಲಾಯಿತು. ಈ ಹಂತದಲ್ಲಿ ಪ್ಲಾಸ್ಟಿಕ ಕವರನಲ್ಲಿ ಇದ್ದು ಅದರಲ್ಲಿರುವ ಒಂದು ಅಂಗಿ ನ್ನು ನೋಡಿ ಗುರುತಿಸಿದ್ದು ಅದನ್ನು **ಮು.ಮಾ.3** ಎಂದು ಪ್ಯಾಂಟನ್ನು **ಮು.ಮಾ.4** ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ

2. ದಿಃ 01.10.2024 ರಂದು ಸಾಯಂಕಾಲ 7.30 ಗಂಟೆಗೆ ನನ್ನನ್ನುಮತ್ತು ಚಾಸಾ-7 ರವರನ್ನು ಪೊಲೀಸ ಠಾಣೆಗೆ ಕರೆಯಿಸಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಮತ್ತು ಇದೇ ಅಂಗಿ ಮತ್ತು ಪ್ಯಾಂಟ ಎಂದು ತೋರಿಸಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-1 ಒಂದೆ ಜಾತಿಗೆ ಸೇರಿರುತ್ತೇವೆ ಆದರೆ ಅವರು ನನ್ನ

ಸಂಬಂಧಿಕರು ಆಗಿರುವುದಿಲ್ಲ. ಪೊಲೀಸರು ನನ್ನನ್ನು ಪೊಲೀಸ ಠಾಣೆಗೆ ಕಾಕಲವಾರ ದಿಂದ ಗುರುಮಠಕಲಗೆ ಕರೆದುಕೊಂಡು ಹೋಗಿರುತ್ತಾರೆ. ನಿ.ಪಿ.32 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಯಾರು ತೆಗೆದಿರುತ್ತಾರೆ ಮತ್ತು ಯಾಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುತ್ತದೆ. ಭಾವಚಿತ್ರಗಳನ್ನು ತೆಗೆದ ಬಗ್ಗೆ ನಿ.ಪಿ.32 ರಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ಪಂಚನಾಮೆಗೆ ನನ್ನನ್ನು ಕರೆಯಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಇವರು ನಮ್ಮ ಸಂಬಂಧಿಕರು ಆಗಿದ್ದರಿಂದ ಅವರಿಗೆ ಸಹಾಯ ಮಾಡುವುದಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.